# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ-30.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಬೋರೇಗೌಡ ಬಿನ್ ಲೇ.ಶಿವಣ್ಣ<br>55 ವರ್ಷ<br>ವ್ಯವಸಾಯ<br>ಮಾರಶೆಟ್ಟಿಹಳ್ಳಿ |
| | ಸತ್ಯ ಪ್ರತಿಜ್ಞೆಯ ಮೇರೆಗೆ |

**ಪಾಟೀ ಸವಾಲುಃ- ಪ್ರತಿ ವಾದಿ ಗಳ ಪರ ವಕೀಲರಾದ ಶ್ರೀ. .ಸಿ.ಬಿ.ಹೆಚ್.ರವರಿಂದ**

ದಾವಾಸ್ವತ್ತು ನನಗೆ ವಿಭಾಗದಲ್ಲಿ ಬಂದಿದ್ದು ಅದರಂತೆ ನಾನು ಹದ್ದುಬಸ್ತು ಮಾಡಿಸಿ ಅದರ ಸ್ವಾಧೀನದಲ್ಲಿದ್ದು ಕಂದಾಯ ಪಾವತಿ ಮಾಡುತ್ತಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂಃ9/3 ರಲ್ಲಿ ಇರುವ 11 ಗುಂಟೆ ಖರಾಬು ಸ.ನಂಃ 9/1 ಕ್ಕೂ ಸೇರುತ್ತದೆ ಎಂದರೆ ಸರಿಯಲ್ಲ. ಸ.ನಂಃ9/1 ಪೋಡ್ ಆಗಿ ಸ.ನಂಃ9/3 ಆಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಸ.ನಂಃ9/1 ಯಾರ ಹೆಸರಿನಲ್ಲಿ ಮುಂದುವರಿಯುತ್ತಿದೆ ಎಂದು ಹೇಳಬಲ್ಲೀರಾ ಎಂದರೆ ಸಾಕ್ಷಿಯು ಬಸವರಾಜು, ಶಂಕರಲಿಂಗಪ್ಪ , ಸಿದ್ದರಾಮಣ್ಣ , ಸದಾಶಿವಯ್ಯ ಇವರ ಹೆಸರಿನಲ್ಲಿದೆ ಎನ್ನುತ್ತಾರೆ. ಪ್ರತಿವಾದಿಗೆ ಸೇರಿದ ಸ.ನಂಃ9/1 ವಿಸ್ತೀರ್ಣ 7.08 ಗುಂಟೆ ಜಮೀನಿನಲ್ಲಿ 11 ಗುಂಟೆ ಖರಾಬು ಸೇರಿದೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾಸ್ವತ್ತಿನಲ್ಲಿ ನನಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ನನ್ನ ಸ್ವಾಧೀನಕ್ಕೆ ತೊಂದರೆ ಮಾಡುತ್ತಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಪ್ರತಿವಾದಿಗಳ ಜಮೀನಿನಲ್ಲಿ ತೊಂದರೆ ಕೊಡುತ್ತಿದ್ದು ಈ ಸಂಬಂದ ಪ್ರತಿವಾದಿ ನನ್ನ ವಿರುದ್ಧ ಓ.ಎಸ್.144/09 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ಪ್ರತಿವಾದಿಯ ಕಡೆಗೆ ತೀರ್ಪಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಡಿ.ಸಿ.ನ್ಯಾಯಾಲಯದಲ್ಲಿ ಸ.ನಂಃ 9/3 ಅನ್ನು ರದ್ದು ಮಾಡಿ ಸ.ನಂಃ9/1 ಅನ್ನು ಯಥಾಸ್ಥಿಗೆ ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಡಿ.ಸಿ. ನ್ಯಾಯಾಲಯದ ಆದೇಶದಂತೆ ಈಗ ಪಹಣಿ ಪತ್ರಿಕೆಯಲ್ಲಿ ಸ.ನಂಃ9/1 ಒಟ್ಟು ವಿಸ್ತೀರ್ಣ 2 ಎಕರೆ 7 ಗುಂಟೆ ಮತ್ತು 7 ವರೆ ಗುಂಟೆ ಖರಾಬು ಎಂದು ಬರುತ್ತಿದೆ ಎಂದರೆ ಸರಿ. ಪ್ರತಿವಾದಿಗಳು ದಾವಾಸ್ವತ್ತಿನಲ್ಲಿ ತೊಂದರೆ ಕೊಡದಿದ್ದರೂ ಸಹ 11 ಗುಂಟೆ ಖರಾಬನ್ನು ಕಬಳಿಸುವ ದುರುದ್ದೇಶದಿಂದ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.